<u>ಕರ್ನಾಟಕ ವಿಧಾನ ಪರಿಷತ್</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1617
ಸದಸ್ಯರ ಹೆಸರು	ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ))
ಉತ್ತರಿಸಬೇಕಾದ ದಿನಾಂಕ	20.03.2020

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	ಚಾಮರಾಜನಗರ ಜಿಲ್ಲೆ, ಮಲೆಮಹದೇಶ್ವರ ಬೆಟ್ಟ ಗ್ರಾಮಪಂಚಾಯಿತಿ ವ್ಯಾಪ್ತಿಯ ಪಡಸಲನತ್ತ ಇಂಡಿಗನತ್ತ, ತೊಳಸಿಕೆರೆ, ನಾಗಮಲೆ, ಮೆಂದಾರೆ, ತೋಕರೆ, ಕೊಕ್ಕಬಕ್ಕರೆ, ಹಳೆಯೂರು ರಸ್ತೆಗಳು ಈಚೆಗೆ ಬಿದ್ದ ಮಳೆಯಿಂದ ಪೂರ್ತಿ ಹಾಳಾಗಿ ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದಲ್ಲಿ ಕೂಡಲೇ ಈ ರಸ್ತೆಗಳನ್ನು ದುರಸ್ತಿಗೊಳಿಸಿ, ಗಿಡಗಂಟಿಗಳನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದೇ;	ಬಂದಿದೆ. ಚಾಮರಾಜನಗರ ಜಿಲ್ಲೆ, ಮಲೆಮಹದೇಶ್ವರ ಬೆಟ್ಟ ಗ್ರಾಮಪಂಚಾಯಿತಿ ವ್ಯಾಪ್ತಿಯ ಸದರಿ ಗ್ರಾಮಗಳು ಮತ್ತು ಅವುಗಳ ಸಂಪರ್ಕ ರಸ್ತೆಗಳು ಅರಣ್ಯ ವ್ಯಾಪ್ತಿಯಲ್ಲಿ ಬರುವುದರಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖಾ ವತಿಯಿಂದ ರಸ್ತೆ ಅಭಿವೃದ್ಧಿಪಡಿಸಲು ನಿರ್ಬಂಧವಿರುತ್ತದೆ.
ಆ.	ಹನೂರು ತಾಲ್ಲೂಕು, ಎಲ್ಲೆಮಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿ.ಎಂ.ಹಳ್ಳಿ (ಗೂಳ್ಯ) ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿರುವ ಹಳ್ಳಕ್ಕೆ ಸೇತುವೆ ನಿರ್ಮಿಸಿ ಎಲ್ಲೆಮಾಳ-ಗೂಳ್ಯ ರಸ್ತೆಯನ್ನು ಅಭಿವೃದ್ಧಿಪಡಿಸಲು ಕ್ರಮ ತೆಗೆದು ಕೊಳ್ಳಲಾಗುವುದೇ?	• ಈ ರಸ್ತೆಯು ಮೂರು ಹಾರ್ಡ್ ಪಾಥ್‌ಗಳನ್ನು ಹೊಂದಿದ್ದು, ಹಾಳಾಗಿರುತ್ತವೆ. • ಹಳ್ಳಕ್ಕೆ ಸೇತುವೆ ನಿರ್ಮಿಸಲು ಹಾಗೂ ರಸ್ತೆ ಅಭಿವೃದ್ಧಿಪಡಿಸಲು ಒಂದಕ್ಕೆ ರೂ.25.00 ಲಕ್ಷದಂತೆ, ಮೂರು ಹಾರ್ಡ್ ಪಾಥ್‌ಗಳಿಗೆ ಒಟ್ಟು ರೂ.75.00 ಲಕ್ಷಗಳ ಅವಶ್ಯಕತೆ ಇದ್ದು, • 2020-21ನೇ ಸಾಲಿನ ಆಯವ್ಯಯ ದಲ್ಲಿ ಹಂಚಿಕೆ ಮಾಡುವ ಅನುದಾನ ವನ್ನಾಧರಿಸಿ ಕ್ರಮ ಕೈಗೊಳ್ಳಬೇಕಿದೆ. ರಸ್ತೆ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.

ಕಡತ ಸಂಖ್ಯೆ: ಗ್ರಾಅಪ:01/86:ಆರ್‌ಆರ್‌ಸಿ:2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

<u>ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1617 ಕ್ಕೆ ವರದಿ.</u>

ಕ್ರಮ ಸಂಖ್ಯೆ	VR NO	ರಸ್ತೆಯ ಹೆಸರು	ರಸ್ತೆಯ ಉದ್ದ ಕಿಮೀ ಗಳಲ್ಲಿ	ರಸ್ತೆ ಮೇಲ್ಮೈ ಲಕ್ಷಣ	ಷರಾ
1	VR-65	ಎಂ.ಎಂ.ಹಿಲ್ ನಿಂದ ಪುದೂರು	17.19		0 ಯಿಂದ 5 ಕಿ.ಮೀ ವರೆಗೆ ಹಾಳಾಗಿರುವ ಡಾಂಬರು ರಸ್ತೆ
					5 ಕಿ.ಮೀ ಯಿಂದ 3 ಕಿ.ಮೀ ವರೆಗೆ ಅರಣ್ಯ ವ್ಯಾಪ್ತಿಯ ಗೇಮ್ ರಸ್ತೆ ಇಂಡಿಗನತ್ತ ಗ್ರಾಮ ಸಿಗುತ್ತದೆ
					9.0 ಕಿಮೀ ಯಿಂದ 10.50 ಕಿಮೀ ವರೆಗೆ ಅರಣ್ಯ ವ್ಯಾಪ್ತಿಯ ಗೇಮ್ ರಸ್ತೆ ಪಡಸಲನತ್ತ ಗ್ರಾಮ ಸಿಗುತ್ತದೆ.
					10.50 ಕಿಮೀ ಯಿಂದ 12.00 ಕಿಮೀ ವರೆಗೆ ಅರಣ್ಯ ವ್ಯಾಪ್ತಿಯ ಗೇಮ್ ರಸ್ತೆ ನಾಗಮಲೈ ಗ್ರಾಮ ಸಿಗುತ್ತದೆ. ಗುಡ್ಡಗಾಡು ರಸ್ತೆ
					12.00 ಕಿಮೀ ಯಿಂದ 17.19 ಕಿಮೀ ವರೆಗೆ ಅರಣ್ಯ ವ್ಯಾಪ್ತಿಯ ಗೇಮ್ ರಸ್ತೆ ನಾಗಮಲೈ ಗ್ರಾಮ ಸಿಗುತ್ತದೆ. ಕಚ್ಚಾ ರಸ್ತೆ
2	VR-68	ಹಳೇಯೂರು ರಸ್ತೆ	0.23	ಡಾಂಬರು ರಸ್ತೆ	VR 65 ರಸ್ತೆಯ ಸರಪಳಿ 3.50 ಕಿಮೀ ಯಿಂದ ಹೊರಟು 0.23 ಕಿಮೀ ಚಲಿಸಿದರೆ ಹಳೇಯೂರು ಸಿಗುತ್ತದೆ.
3	VR-58	ತುಳಸೀಕೆರೆ ರಸ್ತೆ	3.20	ಅರಣ್ಯ ವ್ಯಾಪ್ತಿಯ ಗೇಮ್ ರಸ್ತೆ	VR 65 ರಸ್ತೆಯ ಸರಪಳಿ 6.50 ಕಿಮೀ ಯಿಂದ ಹೊರಟು 3.20 ಕಿಮೀ ಚಲಿಸಿದರೆ ತುಳಸಿಕೆರೆ ಸಿಗುತ್ತದೆ.
4	VR 72	ಎಂ.ಎಂ.ಹಿಲ್ ನಿಂದ ದೊಡ್ಡಾಣೆ ರಸ್ತೆ	6.45	ಅರಣ್ಯ ವ್ಯಾಪ್ತಿಯ ಗೇಮ್ ರಸ್ತೆ ಗ್ರಾವೆಲ್ ರಸ್ತೆ	0 ಯಿಂದ 3 ಕಿ.ಮೀ ಕೊಕ್ಕಬೋರೆ ಗ್ರಾಮ. ಫಾರೆಸ್ಟ್ ಗೇಮ್ ರಸ್ತೆ
					3 ಯಿಂದ 5.50 ಕಿ.ಮೀ ತೋಕೆರೆ ಗ್ರಾಮ, ಫಾರೆಸ್ಟ್ ಗೇಮ್ ರಸ್ತೆ
					5.5 ಯಿಂದ 6.45 ಕಿ.ಮೀ ದೊಡ್ಡಾಣೆ ಗ್ರಾಮ, ಫಾರೆಸ್ಟ್ ಗೇಮ್ ರಸ್ತೆ
5	VR 752	MDR ಹತ್ತಿರ ಅಣಗಳ್ಳಿ ದೊಡ್ಡಿ ಯಿಂದ ಎಲ್ಲೇಮಾಳ ರಸ್ತೆ	8.70		0 ಯಿಂದ 4.50 ಕಿಮೀಯಲ್ಲಿ ಬಿ.ಎಂ.ಹಳ್ಳಿ (ಗೂಳ್ಯ) ಸಿಗುತ್ತದೆ. 3 ಹಾಳಾಗಿರುವ ಹಾರ್ಡ್ ಪಾಥ್ ಇರುತ್ತದೆ.